# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 787 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಉಳ್ಳಾಲ ತಾಲ್ಲೂಕಿನಲ್ಲಿ ಬರುವ ಉಳ್ಳಾಲ-ಸೋಮೇಶ್ವರ ತೀರ ಪ್ರದೇಶದಲ್ಲಿ ಪ್ರತಿ ವರ್ಷ ತೀವ್ರ ಕಡಲ್ಕೊರೆತದಿಂದ ರಸ್ತೆ ಸಂಪರ್ಕ ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಉಳ್ಳಾಲ ತಾಲ್ಲೂಕಿನಲ್ಲಿ ಬರುವ ಉಳ್ಳಾಲ-ಸೋಮೇಶ್ವರ ತೀರ ಪ್ರದೇಶದಲ್ಲಿ ಪ್ರತಿ ವರ್ಷ ತೀವ್ರ ಕಡಲ್ಕೊರೆತದಿಂದ ರಸ್ತೆ ಸಂಪರ್ಕ ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ | ಬಂದಿದ್ದಲ್ಲಿ ಇಂತಹ ಅನಾಹುತಗಳನ್ನು ತಪ್ಪಿಸಲು ಜನರಿಗೆ ಅಗತ್ಯ ರಸ್ತೆ ಸಂಪರ್ಕ ಉತ್ತಮ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು; (ಕಳೆದ 3 ವರ್ಷಗಳಲ್ಲಿ ಆದ ರಸ್ತೆ ಹಾನಿ, ಜನ ಸಂಪರ್ಕ ಕಡಿತ, ಇತ್ಯಾದಿ ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆ, ಉಳ್ಳಾಲ ತಾಲೂಕು, ಮಂಗಳೂರು ವಿಧಾನಸಭಾ ಕ್ಷೇತ್ರ (ಉಳ್ಳಾಲ) ವ್ಯಾಪ್ತಿಗೆ ಸದ್ರಿ ರಸ್ತೆಯು ಒಳಪಟ್ಟಿರುತ್ತದೆ. ಹಾಗೂ ಉಚ್ಚಿಲ ಗ್ರಾಮದಿಂದ ಪ್ರಾರಂಭಗೊಂಡು ಸಮುದ್ರ ಕಿನಾರೆಯಲ್ಲಿ ಸುಮಾರು 2.60 ಕಿ.ಮೀ. ಉದ್ದದಲ್ಲಿ ರಸ್ತೆ ಹಾದು ಹೋಗುತ್ತದೆ ಮತ್ತು ಸಮುದ್ರದ ತೀರದಲ್ಲಿ ಕೊನೆಗೊಳ್ಳುತ್ತದೆ. ಅದರಲ್ಲೂ ಸದ್ರಿ ರಸ್ತೆಯಲ್ಲಿ ಸುಮಾರು 700 ಮೀ. ನಷ್ಟು ಉದ್ದದ ರಸ್ತೆಯ ಅತಿ ಸಮೀಪದಲ್ಲಿ ಸಮುದ್ರ ತೀರ ಹಾದು ಹೋಗಿರುತ್ತದೆ. ಸದರಿ ರಸ್ತೆಯಲ್ಲಿ ಮಳೆಯಿಂದ ಹಾನಿಯಾಗಿರುವ ಭಾಗದ ಸರಪಳಿ 2.60ಕಿ.ಮೀ. ಬಳಿ ಸುಮಾರು 10 ಮನೆಗಳಿಗೆ ಸಂಪರ್ಕವಿಲ್ಲ ದಂತಾಗಿರುತ್ತದೆ. ಜುಲೈ-2020 ರಲ್ಲಿ ಸದರಿ ರಸ್ತೆಯು 600ಮೀ.ನಷ್ಟು ಸಂಪೂರ್ಣವಾಗಿ ಹಾನಿಯಾಗಿ ಸಂಪರ್ಕ ಕಡಿತಗೊಂಡಿರುತ್ತದೆ.<br><br>2019-20ನೇ ಸಾಲಿನಲ್ಲಿ ADB ಇಲಾಖಾ ಅಧಿಕಾರಿಗಳು off shore reef wall ಕಾಮಗಾರಿ ಪೂರ್ಣಗೊಂಡ ನಂತರ ಸಮುದ್ರ ಕೊರೆತ ತಡೆಗಟ್ಟಬಹುದು ಎಂದು ತಿಳಿಸಿರುವ ಮೇರೆಗೆ ಮೇ 2021 ರಂದು ತಾತ್ಕಾಲಿಕವಾಗಿ 400ಮೀ.ಗೆ ಮಣ್ಣನ್ನು ಸಮುದ್ರ ಮಟ್ಟದಿಂದ ಎತ್ತರಗೊಳಿಸಿ ಜಲ್ಲಿಯ ಮೇಲ್ಪದರದೊಂದಿಗೆ ಜನರಿಗೆ ದಿನನಿತ್ಯ ಸಂಚಾರಕ್ಕೆ ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಆದರೆ ತೌಕ್ತೆ ಚಂಡಮಾರುತದ ಸಮಯದಲ್ಲಿ ಸದರಿ ರಸ್ತೆಯೂ ಸಂಪೂರ್ಣವಾಗಿ ಹಾನಿಯಾಗಿರುತ್ತದೆ. 2021ರ ಮೇ ನಂತರ ಸಂಪೂರ್ಣವಾಗಿ ಸಂಪರ್ಕ ಕಡಿತಗೊಂಡಿದ್ದು, ಬಂದರು ಮತ್ತು ಮೀನುಗಾರಿಕೆ ಇಲಾಖೆವತಿಯಿಂದ ಸಮುದ್ರದ ಬದಿಗೆ ಅಲ್ಲಲ್ಲಿ ಕಲ್ಲುಗಳನ್ನು ಹಾಕಲಾಗಿರುತ್ತದೆ.<br><br>ಪ್ರಸ್ತುತ ಹಂತದಲ್ಲಿ ಯಾವುದೇ ಕಾಮಗಾರಿ ಕೈಗೊಂಡರೂ |
| ಇ | ಇಂತಹ ವಿಷಯಗಳು ಪದೇ ಪದೇ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದರೂ ಸರ್ಕಾರ ಯಾವುದೇ ಕ್ರಮಗಳನ್ನು ಕೈಗೊಳ್ಳದಿರಲು ಕಾರಣವೇನು? (ಸ್ಪಂದಿಸಿದ್ದೆ, ಆಗಿದ್ದಲ್ಲಿ ವಿವರ ನೀಡುವುದು) | |

| | | |
|---|---|---|
| | | ಸಮುದ್ರ ಪಾಲಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಒಟ್ಟಾರೆ ಬಂದರು ಮತ್ತು ಮೀನುಗಾರಿಕಾ ಇಲಾಖಾವತಿಯಿಂದ ಭಾಗಶಃ ಕಲ್ಲುಗಳ ಬದಲಿಗೆ ಶಾಶ್ವತ ಪರಿಹಾರ ಒಳಗೊಂಡ ತಡೆಗೋಡೆ ಕಾಮಗಾರಿ ನಿರ್ಮಿಸಿದಲ್ಲಿ ಮಾತ್ರ, ಲೋಕೋಪಯೋಗಿ ಇಲಾಖಾವತಿಯಿಂದ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಿ ಸಂಚಾರಕ್ಕೆ ಅನುವು ಮಾಡಿಕೊಡಲು ಕ್ರಮವಹಿಸಬಹುದಾಗಿರುತ್ತದೆ. |
| ಈ | ಉತ್ತಮ ರಸ್ತೆ ಸಂಪರ್ಕ ವ್ಯವಸ್ಥೆಗೆ ಸರ್ಕಾರ ಕೈಗೊಳ್ಳಲಿರುವ ಕಾರ್ಯ ಯೋಜನೆಗಳೇನು? (ಸಂಪೂರ್ಣ ವಿವರ ನೀಡುವುದು) | ಬಂದರು ಮತ್ತು ಮೀನುಗಾರಿಕಾ ಇಲಾಖಾವತಿಯಿಂದ ಶಾಶ್ವತ ಪರಿಹಾರ ತಡೆಗೋಡೆ ಕಾಮಗಾರಿ ನಿರ್ಮಿಸಿದ ನಂತರ ಲೋಕೋಪಯೋಗಿ ಇಲಾಖಾವತಿಯಿಂದ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಿ ಸಂಚಾರಕ್ಕೆ ಅನುವು ಮಾಡಿಕೊಡಲು ಕ್ರಮವಹಿಸಬಹುದಾಗಿರುತ್ತದೆ. |

ಕಡತ ಸಂಖ್ಯೆ: ಲೋಇ 53 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು